ಶ್ರೀ ರಾಧಾಭಟ್ :—ಬೆಲಿಕೇರಿ ಹಾರವಾಡ ಮೀನುಗಾರಿಕೆ ರಸ್ತೆ ಅಭಿವೃದ್ಧಿಗೊಳಿಸುವ ವಿಷಯ ಕೇಂದ್ರ ಸರಕಾರದ ಪರಿಶೀಲನೆಯಲ್ಲಿದೆ ಎಂದು ಉತ್ತರದಲ್ಲಿ ತಿಳಿಸಲಾಗಿದೆ. ಆದರೆ ಕಳೆದ ಅಧಿವೇಶನದಲ್ಲಿ ನನ್ನ ಪ್ರಶ್ನೆಗೆ ಲೋಕೋಪಯೋಗಿ ಸಚಿವರು ಈ ರಸ್ತೆಗೆ ಮೆಟಲ ಮಾಡಲು ಉದ್ದೇಶಿಸಲಾಗಿದೆ, ಆದಷ್ಟು ಬೇಗ ಇದರ ಬಗ್ಗೆ ಕ್ರಮ ಕೈಕೊಳ್ಳಲಾಗುವುದು ಎಂದು ಹೇಳಿದ್ದರು. ಆದರೆ ಅದು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಈಗಲಾದರೂ ಈ ಬಗ್ಗೆ ಮನಸ್ಸುಮಾಡಿ ಮೀನುಗಾರಿಕೆಯ ಅಭಿವೃದ್ಧಿಯ ಸಲುವಾಗಿ ರಾಜ್ಯ ಸರಕಾರ ಈ ರಸ್ತೆ ಕೆಲಸವನ್ನು ಕೈಕೊಳ್ಳುವುದೇ ?

ಶ್ರೀ ಕೆ. ಟಿ. ರಾಥೋಡ :—ಇದು ಸೆಂಟ್ರಲ್ ಸ್ಕೀಮಿನ ಕೆಳಗೆಬರುವ ಕೆಲಸ. ಈ ಬಗ್ಗೆ ಅಂದಾಜು ಮಾಡಿ ಕೇಂದ್ರ ಸರಕಾರಕ್ಕೆ ಮಂಜೂರಾತಿಗೆ ಕಳಿಸಿದೆ. 1971 ರಿಂದಲೇ ಈ ಕೆಲಸದ ಮಂಜೂರಾತಿಗೆ ಬರೆಯಲಾಗಿದೆ. ದಿನಾಂಕ 31_7_1973 ರಂದು ಕೇಂದ್ರ ಸರಕಾರಕ್ಕೆ ಒಂದು ಡಿಓ ಪತ್ರ ಬರೆದು ತಕ್ಷಣ ಇದನ್ನು ಮಂಜೂರು ಮಾಡಬೇಕೆಂದು ಕೇಳಲಾಗಿದೆ. ಈ ವರ್ಷ ಇದಕ್ಕೆ ಮಂಜೂರಾತಿ ದೊರೆತು ಈ ಕೆಲಸ ತೆಗೆದುಕೊಳ್ಳಬಹುದೆಂದು ಆಶಿಸಲಾಗಿದೆ.

ಶ್ರೀಮತಿ ರಾಧಾಭಟ್:—ಇದು ಬಹಳ ಆವಶ್ಯಕವಾದ ರಸ್ತೆ ಮೀನುಗಾರರು ಬಹಳ ಕಷ್ಟಪಡುತ್ತಿದ್ದಾರೆ. ಆದುದರಿಂದ ಆದಷ್ಟು ಬೇಗ ಇದರ ಕೆಲಸ ಕೈಗೊಳ್ಳಲು ಮಂತ್ರಿಗಳು ಮನಸ್ಸುಮಾಡುವರೇ ?

ಶ್ರೀ ಕೆ. ಟಿ. ರಾಥೋಡ :—ಈ ಕೆಲಸ ತೀವ್ರವಾಗಿ ಮಾಡಬೇಕೆಂಬ ಇಚ್ಛೆ ಸರಕಾರಕ್ಕೂ ಇದೆ. ಆದರೆ ಕೇಂದ್ರ ಸರಕಾರದಿಂದ ಮಂಜೂರಾಗುವವರೆಗೆ ಕಾಯಬೇಕಾಗಿದೆ. ಅದರಿಂದ ವಿಳಂಬವಾಗಿದೆ. ಆದಷ್ಟು ಜಾಗ್ರತೆ ಮಂಜೂರಾತಿ ಪಡೆಯಲು ಪ್ರಯತ್ನಮಾಡುತ್ತೇವೆ.

MYSORE ACETATE AND CHEMICALS CO., LTD.

128 SRI KAGDOU THIMMAPPA (Sagar).—

Will the Minister for Industries be pleased to state:—

(*a*) the capital invested in the Mysore Acetate and Chemicals Co. Ltd. and the share of the State Government in it ;

(*b*) the profit and loss account of the Company from its inception up to-date (yearwise) ;

(*c*) the amount spent by the present Managing Director during 1972-73 on his T.A. and D.A. and also during March and April 1973 towards his Delhi trips?

SRI S. M. KRISHNA (Minister for Industries).—

(*a*) The total investment is Rs. 10.81 crores, comprising of share capital and secured/unsecured loans. The investment of the State Government is Rs. 50 lakhs in the Companys equity Capital. In addition Mysore State Industrial Investment and Development Corporation has invested Rs. 75 lakhs in equity.

(*b*) The factory went into commercial production on 1st July 1969. The particular are given below :—

Year	Profit before interest and depreciation.	Profit/loss after Interest but before Depreciation.	Profit/loss after Interest and depreciation.
	Rs.	Rs.	Rs.
1969	+11,32,413	—14,59,887	—37,80,763
1970	+14,87,531	—36,98,666	—88,21,926
1971	+22,50,192	—27,94,617	—82,99,691
1972	+17,18,415	41,89,722	—98,87,906
Total	+65,88,551	—121,42,892	—307,81,286

The Company's financial year is from January to December.

(*c*) The present Managing Director took charge on 2nd November 1972.

Amount spent during :—

November 1972	Rs.	1,985-00
December 1972	Rs	2,509-40
March and April 1973	Rs.	3,785-40

ಶ್ರೀ ಕಾಗೋಡು ತಿಮ್ಮಪ್ಪ :—1969 ರಿಂದ 1971 ರವರೆಗೆ ಈ ಕಂಪೆನಿಯ ಮ್ಯಾನೇಜಿಂಗ್ ಡೈರಕ್ಟರು ಮತ್ತಿತರ ಡೈರೆಕ್ಟರುಗಳು ಯಾರು ಯಾರಿದ್ದರು ?

ಶ್ರೀ ಎಸ್ ಎಂ. ಕೃಷ್ಣ :—ಈ ಕಂಪೆನಿ ಪ್ರಾರಂಭವಾದಾಗಿನಿಂದಲೂ ಈಗ ನಮ್ಮ ಇಂಡಸ್ಟ್ರಿಯಲ್ ಇಲಾಖೆಯ ಸೆಕ್ರೆಟರಿಯಾಗಿರುವ ವೇಣುಗೋಪಾಲನಾಯ್ಡು ರವರು ಅದರ ಮ್ಯಾನೇಜಿಂಗ್ ಡೈರೆಕ್ಟರಾಗಿದ್ದರು.

ಶ್ರೀ ಕಾಗೋಡು ತಿಮ್ಮಪ್ಪ :—ಈ ಕಂಪೆನಿಯಲ್ಲಿ ಹೆಚ್ಚು ನಷ್ಟವಾಗಿರುವುದಕ್ಕೆ ಕಾರಣವೇನು ? ಅದನ್ನು ಕಂಡುಹಿಡಿಯಲಾಗಿದೆಯೇ ? ಇದಕ್ಕೆ ಜವಾಬ್ದಾರರಾದವರಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಎಸ್. ಎಂ. ಕೃಷ್ಣ :....ಈ ಕಂಪೆನಿಯಲ್ಲಿ ಇಷ್ಟು ನಷ್ಟವಾಗುವುದಕ್ಕೆ ಕಾರಣ ಊಟಿಯಲ್ಲಿರುವ ಹಿಂದೂಸ್ಥಾನ ಫೋಟೋ ಫಿಲ್ಮ್ಸ್ ಕಂಪನಿಗೆ ಬೇಕಾದ ರಾಮೆಟೀರಿಯಲ್ಸ್ ಇಲ್ಲಿ ತಯಾರಿಸಬೇಕೆಂಬ ಉದ್ದೇಶದಿಂದ ಈ ಕಾರ್ಖಾನೆಯನ್ನು ಸ್ಥಾಪಿಸಲಾಯಿತು. ಅದರೆ ದುರದೃಷ್ಟವಶಾತ್ ಆ ಫಿಲ್ಮ್ಸ್ ಕಂಪೆನಿಯು ಸಾಕಷ್ಟು ಕೆಲಸಮಾಡಲು ಸಾಧ್ಯವಾಗದೆ ಕಾರ್ಖಾನೆಯಲ್ಲಿ ಉತ್ಪತ್ತಿಯಾದಷ್ಟು ಮಾಲನ್ನು ತೆಗೆಕೊಳ್ಳಲು ಸಾಧ್ಯವಾಗಲಿಲ್ಲ. ಈ ಒಂದು ಕಾರಣದಿಂದ ನಷ್ಟವಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಸರಕಾರ ಈ ನಷ್ಟವನ್ನು ತಡೆಯಲು ಏನು ಪ್ರಯತ್ನ ಮಾಡಿದೆ ?

ಶ್ರೀ ಎಸ್. ಎಂ. ಕೃಷ್ಣ :....ಈ ಕಾರ್ಖಾನೆಯಲ್ಲಿ ಪ್ರೊಡ್ಯೂಸ್ ಮಾಡುವ ರಾಮೆಟೀರಿಯಲ್ಸ್‌ಗೆಲ್ಲಾ ಒಂದೇ ಔಟ್‌ಲೆಟ್ ಇದ್ದರೆ ಸಾಲದು ಎಂದು ವಿಚಾರಮಾಡಿ ಡೈವರ್ಸಿಫೈ ಮಾಡಬೇಕು ಎಂದು ಎರಡು ಮೂರು ಯೋಚನೆ ಮಾಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್ : ...ಮಂತ್ರಿಗಳು ಹೇಳಿದ ಹಿಂದೂಸ್ಥಾನ ಫೋಟೋ ಫಿಲ್ಮ್ಸ್ ಕಂಪನಿಯಲ್ಲದೆ ಬೇರೆ ಕಂಪೆನಿಗಳಿಗೆ ಈ ಕಾರ್ಖಾನೆಯಲ್ಲಿ ತಯಾರಾಗುವುದನ್ನು ಒದಗಿಸಲು ಮೊದಲು ಯೋಚನೆ ಮಾಡಿರಲಿಲ್ಲವೇ ? ಹಾಗೆ ಯೋಚನೆ ಮಾಡದೆ ಕೈಬಿಟ್ಟಿರುವುದು ನಷ್ಟಕ್ಕೆ ಕಾರಣವಾಗಿದೆಯಲ್ಲವೇ ?

ಶ್ರೀ ಎಸ್. ಎಂ ಕೃಷ್ಣ :—ಈ ದೇಶದಲ್ಲಿ ಡೈಅಸಿಟೇಟನ್ನು ನಾನಾ ಜನರು ತಯಾರಿಸುತ್ತಿದ್ದಾರೆ. ಅದನ್ನು ಛತ್ರಿಗಳ ಹಿಡಿಗಳಿಗೆ ಉಪಯೋಗಿಸಬಹುದು. ಈ ವಿಚಾರದಲ್ಲಿ ಇಂದು ಕೂಡ ಈ ಉದ್ದಿಮೆಗೆ ಸಂಬಂಧಪಟ್ಟ ಕೇಂದ್ರ ಸರಕಾರದ

ಮಂತ್ರಿಗಳಿಗೆ ಕಾಗದ ಬರೆಯಲಾಗಿದೆ. ಊಟಿ ಕಂಪೆನಿಯು ರಾ ಮೇಟರಿಯಲ್ಸ್ ಉತ್ಪತ್ತಿ ಮಾಡುವುದನ್ನು ಕಳೆದ ವರ್ಷ ಹೆಚ್ಚು ಹೆಗೆದುಕೊಳ್ಳಲು ಅವಕಾಶವಾಗಿಲ್ಲ ಉತ್ಪತ್ತಿಯಾಗುವುದನ್ನು ಪೂರ್ಣವಾಗಿ ಉಪಯೋಗಮಾಡುವ ಬಗ್ಗೆ ಕೇಂದ್ರದ ಮಂತ್ರಿಗಳಾದ ಶ್ರೀ ಸುಬ್ರಹ್ಮಣ್ಯಂರವರು ಭರವಸೆ ಕೊಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ :—ನಷ್ಟ ತಪ್ಪಿಸುವುದಕ್ಕೆ ಎಡಡು ಮೂರು ಯೋಜನೆಗಳಿವೆ ಎಂದು ಹೇಳಿದರು. ಅವು ಯಾವುವು ?

ಶ್ರೀ ಎಸ್. ಎಂ. ಕೃಷ್ಣ :-ಫಿಲ್ಟರ್ ಟಿಪ್ಸ್‌ಟು ಸಿಗರೇಟ್ ಇದಕ್ಕೆ ಕಾರ್ಖಾನೆಯಲ್ಲಿ ತಯಾರಾಗುವ ರಾಮೆಟೀರಿಯಲ್ಸ್ ಉಪಯೋಗ ಮಾಡಬೇಕು ಎಂಬುದೊಂದು. ಇನ್ನೊಂದು ಅಸಿಟೇಟ್ ಷೀಟ್ ಅಂಡ್ ಯೂರ್ನಗೆ ಉಪಯೋಗ ಮಾಡಬೇಕೆಂಬುದು.

ಶ್ರೀ ಕಾಗೋಡು ತಿಮ್ಮಪ್ಪ :—ಈ ಕಾರ್ಖಾನೆಯಲ್ಲಿ ನಷ್ಟವಾಗುತ್ತಿದ್ದರೂ ಕೂಡ ಮ್ಯಾನೇಜಿಂಗ್ ಡೈರೆಕ್ಟರು ಹೆಚ್ಚು ಟಿ ಎ ಮತ್ತು ಡಿ ಎ ಪಡೆದಿರುತ್ತಾರೆ. ಇದಕ್ಕೆ ಅವಕಾಶವಿಲ್ಲದಂತೆ ತಪ್ಪಿಸುವಿರಾ ?

ಶ್ರೀ ಎಸ್. ಎಂ. ಕೃಷ್ಣ :—ಮ್ಯಾನೇಜಿಂಗ್ ಡೈರೆಕ್ಟರುಸೇಲ್ಸ್ ಪ್ರಮೋಷನ್ ವಗೈರೆ ಬೇರೆ ಕೆಲಸಗಳಿಗೂ ಕೂಡ ಗಮನ ಕೊಡಬೇಕಾಗಿದೆ. ದೆಹಲಿ, ಬೊಂಬಾಯಿ ಮುಂತಾದ ಕಡೆಗಳಿಗೆ ಹೋಗಿ ಬರಬೇಕಾಗಿದೆ. ಈಗ ಐ ಎ ಎಸ್ ಅಫೀಸರನ್ನು ಈ ಕೆಲಸಕ್ಕೆ ನೇಮಕ ಮಾಡಿದರೆ ಪ್ರಯೋಜನವಿಲ್ಲ, ಟೆಕ್ನೋಕ್ರ್ಯಾಟ್ ಒಬ್ಬರನ್ನು ನೇಮಿಸಿದರೆ ಭವಿಷ್ಯ ಉತ್ತಮವಾಗಬಹುದು ಎಂದು ಯೋಚಿಸಿ ಅದರಂತೆ ವ್ಯಾಡಿದ್ದೇವೆ. ಕಳೆದ 9 ತಿಂಗಳಿಂದ ಹಾಗೆ ಮಾಡಿದಮೇಲೆ ಪರಿಸ್ಥಿತಿ ಸುಧಾರಿಸಿದೆ.

GOVERNMENT YARN DEPOTS IN GULBARGA DISTRICT.

242. SRI BAPU GOWDA RAYAPPA (Shahapur)—

Will the Minister for Industries be pleased to state :—

(*a*) the number of Government Yarn Depots opened in Gulbarga District.

(*b*) the amount invested in each depot (Depotwise information may be given.);